


**ಭಾಗ–೧**

**ಶ್ರೀ**ಕ್ಷೇತ್ರ ಗೋಂದಾವಲಿ ಊರು, ಸತಾರಾ ಪಂಢರಾಪುರ ರಸ್ತೆಯಲ್ಲಿ, ಸತಾರಾದಿಂದ ೬೪ ಕಿ.ಮೀ. ದೂರದಲ್ಲಿದೆ. ಪುಣೆಯಿಂದ ಸಾಸವಾಡಾ ಫಲಟನ್ ಮಾರ್ಗವಾಗಿ ಅಲ್ಲಿಗೆ ನೇರವಾಗಿ ಬಸ್ಸುಗಳಿವೆ. ಶ್ರೀ ಸದ್ಗುರು ಮಹಾರಾಜರ ಸಮಾಧಿ ಮಂದಿರವು ಗೋಂದಾವಲಿ ಬಸ್ ಸ್ಟ್ಯಾಂಡಿನಿಂದ ಇನ್ನೂರು ಮೀಟರ್ ಅಂತರದಲ್ಲಿದೆ. ಸಮಾಧಿಯು ನೆಲಮನೆಯಲ್ಲಿದ್ದು ಅದರ ಮೇಲೆ ಶ್ರೀಗೋಪಾಲಕೃಷ್ಣನ ಮೂರ್ತಿ ಇದೆ. ಸಮಾಧಿ ಮಂದಿರದಲ್ಲಿ ಬೆಳಗ್ಗೆ ಕಾಕಡಾರತಿ, ತ್ರಿಕಾಲಪೂಜೆ, ಅಭಿಷೇಕ, ನಾಮಜಪ, ವಿಷ್ಣುಸಹಸ್ರನಾಮ ಮುಂತಾದ ಸ್ತೋತ್ರಗಳ ಪಠನೆ, ಭಜನೆ, ನಿತ್ಯೋಪಾಸನೆ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಸದ್ಗುರು ಬ್ರಹ್ಮಚೈತನ್ಯ ಮಹಾರಾಜರು ಹತ್ತೊಂಬತ್ತನೆ ಶತಮಾನದ ಭಾರತವನ್ನು ಬೆಳಗಿದ ಮಹಾನ್ ಆಧ್ಯಾತ್ಮಿಕ ಅನುಭಾವಿಗಳು ಹಾಗೂ ಸತ್ಪುರುಷರು. ಅವರು ಬಾಲ್ಯದಿಂದಲೆ ಶ್ರೀರಾಮನ ಅನನ್ಯ ಭಕ್ತರಾಗಿದ್ದರು ಹಾಗೂ ಭಗವನ್ನಾಮ ಸ್ಮರಣೆಯಲ್ಲಿ ಅತ್ಯಂತ ಪ್ರೀತಿಯುಳ್ಳವರಾಗಿದ್ದರು. ನಾಮಸ್ಮರಣೆ, ಸಗುಣೋಪಾಸನೆ, ಅನ್ನದಾನ ಹಾಗೂ ಗೋರಕ್ಷಣೆ – ಈ ನಾಲ್ಕು ಸಾಧನೆಗಳನ್ನು ಸಾಕಾರಗೊಳಿಸುವ ಸಲುವಾಗಿ ಶ್ರೀಮಹಾರಾಜರು ಭಾರತದ ಅನೇಕ ಪ್ರಾಂತಗಳಲ್ಲಿ ಶ್ರೀರಾಮ ಮಂದಿರಗಳನ್ನು ಸ್ಥಾಪಿಸಿದರು. ಈ ಮಂದಿರಗಳು ಆಧ್ಯಾತ್ಮಿಕ ಕೇಂದ್ರಗಳಾಗಬೇಕೆಂಬುದು ಶ್ರೀಮಹಾರಾಜರ ಅಭಿಪ್ರಾಯ ವಾಗಿತ್ತು.

ಶಕ ೧೭೬೬ ರ ಮಾಘ ಶುದ್ಧ ದ್ವಾದಶಿ (೧೯ ಫೆಬ್ರವರಿ ೧೮೪೫) ಬುಧವಾರ ಬೆಳಗ್ಗೆ ೯.೩೦ರ ಸುಮಾರಿಗೆ ಗೋಂದಾವಲಿ ಯಲ್ಲಿ ಶ್ರೀಮಹಾರಾಜರ ಜನ್ಮವಾಯಿತು. ಅಜ್ಜ – ಅಜ್ಜಿ ಇವರನ್ನು ಗಣಪತಿ ಎಂದು ಕರೆದರೆ, ತಂದೆತಾಯಿಯರು 'ಗಣೂ' ಎಂದೂ ಕರೆಯುತ್ತಿದ್ದರು, ಉತ್ತರ ಭಾರತದ ಜನರು ಇವರನ್ನು ದಖಿನ್ ಕೇ ಮಹಾರಾಜ ಎನ್ನುತ್ತಿದ್ದರು. ಶ್ರೀಮಹಾರಾಜರಿಗೆ ಪ್ರವಾಸದ ಬಗೆಗೆ ವಿಲಕ್ಷಣವಾದ ಅಭಿರುಚಿ ಇತ್ತು. ಅವರು ೧೨ ನೆಯ ವಯಸ್ಸಿನಿಂದ ೪೫ ನೆಯ ವರ್ಷದವರೆಗೆ ಬಹಳಷ್ಟು ಕಡೆ ಪ್ರವಾಸ ಮಾಡಿದರು. ತಮ್ಮ ೬೨ ನೆಯ ವಯಸ್ಸಿನಲ್ಲಿಯೂ ಕಾಶೀ ಕ್ಷೇತ್ರದಲ್ಲಿ ಕಾಲಿಗೆ ಪಾದುಕೆ ಹಾಕಿಕೊಂಡು ನೂರಾ ಇಪ್ಪತ್ತು ಕಲ್ಲಿನ ಮೆಟ್ಟಿಲುಗಳ ಘಟ್ಟವನ್ನು ಅವರು ನಿರಾಯಾಸವಾಗಿ ಯುವಕರಂತೆ ಹತ್ತಿ ಇಳಿಯುತ್ತಿದ್ದರು ಚಿಕ್ಕ ಮಕ್ಕಳನ್ನು ಕಂಡರೆ ಅವರಿಗೆ ತುಂಬಾ ಪ್ರೀತಿ; ಸ್ತ್ರೀಯರ ವಿಷಯದಲ್ಲಿ ಅತ್ಯಂತ ಗೌರವ. ಸ್ತ್ರೀಯರೇ ನಿಜವಾಗಿಯೂ ಕುಟುಂಬಕ್ಕಾಗಿ ಕಷ್ಟಪಡುತ್ತಾರೆ ಎಂದು ಹೇಳುತ್ತಿದ್ದರು. ತಾಯಿ ಹಾಗೂ ತಾಯಿಯ ಪ್ರೇಮದ ವಿಷಯದ ಬಗ್ಗೆ ಹೇಳುವಾಗಲೆಲ್ಲ ಅವರ ಕಂಠ ತುಂಬಿ ಬರುತ್ತಿತ್ತು ಹಾಗೂ ಕಣ್ಣು ಹನಿಗೂಡುತ್ತಿದ್ದವು.

ತಮ್ಮ ಬಳಿಗೆ ಬರುವ ಪ್ರತಿಯೊಬ್ಬರಿಗೂ ಯಾವುದೇ ಭೇದ ವಿಲ್ಲದೆ ಊಟ ಹಾಕುತ್ತಿದ್ದರು. ನಿಜವಾಗಿ ಹೇಳಬೇಕೆಂದರೆ ಭಗವಂತನ ನಾಮವನ್ನು ಎಷ್ಟು ಮುಕ್ತಹಸ್ತದಿಂದ ಹಂಚು ತ್ತಿದ್ದರೋ ಅಷ್ಟೇ ಮುಕ್ತಹಸ್ತದಿಂದ ಅನ್ನದಾನವನ್ನೂ ಮಾಡು ತ್ತಿದ್ದರು. ಎಷ್ಟೋ ವೇಳೆ. ಜನರಿಗೆ ಊಟ ಬಡಿಸಿ, ಅವರ ಊಟವಾದ ಮೇಲೆ ತಾವು ಊಟ ಮಾಡುತ್ತಿದ್ದರು. ಯಾವುದೇ ಕೆಲಸ ಮಾಡುವಾಗ **'ಶ್ರೀರಾಮ್ ಜಯರಾಮ್ ಜಯ ಜಯ ರಾಮ್'** ಎಂದು ಉಚ್ಚ ಸ್ವರದಲ್ಲಿ ಹೇಳಿಕೊಳ್ಳುವ ಪದ್ಧತಿಯನ್ನು ಶ್ರೀಮಹಾರಾಜರೇ ಪ್ರಾರಂಭ ಮಾಡಿದರು.

ಜೀವನದ ಪ್ರತಿಯೊಂದು ಕ್ಷಣವನ್ನೂ ಹೇಗೆ ಭಗವದ್ಭಾವದಲ್ಲಿ ಕಳೆಯಬೇಕೆಂದು ತಿಳಿಯುವುದು ಸಾಮಾನ್ಯರಿಗೆ ಕಠಿಣವೇ. ಆದ್ದರಿಂದಲೇ ಶ್ರೀಮಹಾರಾಜರು ಶ್ರೀರಾಮನ ಮೂರ್ತಿಯನ್ನು ಗೋಂದಾವಲಿ ತಂದು ನಿಲ್ಲಿಸಿದರು. ಅದನ್ನು ಕೇವಲ ಮೂರ್ತಿ ಯೆಂದು ಪರಿಗಣಿಸದೆ. ಅತ್ಯಂತ ಪ್ರೇಮದಿಂದ ಕಾಣುತ್ತಿದ್ದರು. ಆ ಪ್ರೇಮ ಎಷ್ಟು ಉತ್ಕಟವಾಗಿತ್ತೆಂದರೆ ಶ್ರೀಮಹಾರಾಜರು ನೈಮಿಷಾರಣ್ಯಕ್ಕೆ ತೀರ್ಥಯಾತ್ರೆಗೆ ಹೊರಟು ನಿಂತಾಗ ಅವರು ಸ್ಥಾಪಿಸಿದ ರಾಮನ ಮೂರ್ತಿಯ ಕಣ್ಣುಗಳಲ್ಲಿ ನೀರು ಬಂದಿ ತೆಂದು ಪ್ರತೀತಿ. ತಮ್ಮ ಬಳಿಗೆ ಬರುತ್ತಿದ್ದ ಭಕ್ತರಿಗೆ ಅತ್ಯಂತ

ಪ್ರೇಮದಿಂದ, "ನೀವು ನನ್ನ ರಾಮನನ್ನು ಕಣ್ತುಂಬ ನೋಡಿರಿ. ಆಮೇಲೆ ನಿಮ್ಮ ಮನೆಗೆ ಹೋಗಿ" ಎನ್ನುತ್ತಿದ್ದರು. ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಘಟನೆಯಲ್ಲೂ ಶ್ರೀರಾಮನ ಇಚ್ಛೆಯೇ ಇದೆ ಎಂದು ಅವರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಭಗವಂತನ ನಾಮದ ಮಹಿಮೆಯನ್ನು ಹಾಡುತ್ತ ಹಾಡುತ್ತ ಅವರ ಆಯುಷ್ಯದ ಪ್ರತಿಯೊಂದು ಕ್ಷಣವೂ ಕಳೆಯಿತು. ನಾಮದ ಮಹತ್ವವನ್ನು ಹೇಳುವುದಕ್ಕಾಗಿಯೇ ಅವರು ಬಂದರು. "ಯಾರು ಭಗವನ್ನಾಮವನ್ನು ಜಪಿಸುತ್ತಾರೆಯೋ ಅವರ ಹಿಂದೆ ಶ್ರೀರಾಮನು ಸದಾ ನಿಂತೇ ಇರುತ್ತಾನೆ, ಅವರಿಗೆ ಕಲ್ಯಾಣವನ್ನು ಮಾಡುತ್ತಾನೆ. ನನ್ನ ಈ ಮಾತನ್ನು ಕೊನೆಯವರೆಗೂ ನೀವು ಮರೆಯಬೇಡಿರಿ" ಎಂದು ಅವರು ಹೇಳಿದ್ದಾರೆ.

ಡಿಸೆಂಬರ್ ೨೨, ೧೯೧೩ ಸೋಮವಾರದಂದು ಸೂರ್ಯೋದಯದ ಹೊತ್ತಿಗೆ ಗೋಂದಾವಲಿಯಲ್ಲಿಯೇ ತಮ್ಮ ೬೮ನೆಯ ವಯಸ್ಸಿನಲ್ಲಿ ಶರೀರವನ್ನು ತ್ಯಜಿಸಿದರು.

ಸಂಗ್ರಹ:- ಉಮಾ ಸಂಜಯ್ ಕಾಕಡೆ, ಬೆಳಗಾವಿ

### ಭಾಗ -೨

## ಸ್ವಾರ್ಥಮಯ ಪ್ರಪಂಚ

ಗೋಂದಾವಲಿ ಒಂದು ಚಿಕ್ಕ ಹಳ್ಳಿ, ಅಲ್ಲಿಗೆ ಅನೇಕ ಭಕ್ತರು ದೂರದ ಊರುಗಳಿಂದ ಬರುತ್ತಿದ್ದರು. ಅವರ ಬೆಲೆ ಬಾಳುವ ಒಡವೆ ಪೆಟ್ಟಿಗೆಗಳನ್ನು ಇಡಲು ಗೋಂದಾವಲಿಯಲ್ಲಿ ಪ್ರತ್ಯೇಕವಾದ ಕೋಣೆಯಾಗಲಿ, ತಿಜೋರಿಯಾಗಲಿ ಇರಲಿಲ್ಲ. ಎಲ್ಲ ಭಕ್ತೆಯರೂ ತಮ್ಮ ಒಡವೆ ಪೆಟ್ಟಿಗೆಗಳನ್ನು ಮಹಾರಾಜರ ಬಳಿ ಕೊಡುತ್ತಿದ್ದರು. ಮಹಾರಾಜರು ಅವುಗಳನ್ನು ತಮ್ಮ ಮಂಚದ ಅಡಿಯಲ್ಲಿ ಇಡುತ್ತಿದ್ದರು. ಇದೇ ಅತ್ಯಂತ ಸುರಕ್ಷಿತವಾದ ಸ್ಥಳವಾಗಿತ್ತು. ಹೀಗಿರುವಾಗ ಸಾಂಗ್ಲಿಯಿಂದ ಬಂದ ಭಕ್ತೆಯೊಬ್ಬಳು ತನ್ನ ಒಡವೆ ಪೆಟ್ಟಿಗೆಯನ್ನು ಮಹಾರಾಜರ ಬಳಿ ಇರಿಸಿದ್ದಳು. ಮಹಾರಾಜರು ಒಂದು ಸಂಜೆ ವಾಯುವಿಹಾರಕ್ಕೆ ಹೋಗಿದ್ದರು. ಹಿಂದಿರುಗುವಾಗ ಅವರಿಗೆ ಅನಿರೀಕ್ಷಿತವಾಗಿ ಉಸಿರಾಟದ ಸಮಸ್ಯೆ ಬಂದೆರಗಿತು. ಅದು ಕ್ಷಣಕ್ಷಣಕ್ಕೂ ಎಷ್ಟು ಉಲ್ಬಣಗೊಂಡಿತೆಂದರೆ ಅವರನ್ನು ಆರಾಮಕುರ್ಚಿಯ ಮೇಲೆ ಕೂರಿಸಿ ಭಕ್ತರು ಹೊತ್ತುಕೊಂಡು ಬರಬೇಕಾಯಿತು. ಅವರ ದೇಹ ತಣ್ಣಗಾಗುತ್ತ ಬಂತು. ನೀಲಿ ಬಣ್ಣಕ್ಕೆ ತಿರುಗಿ, ಉಸಿರಾಟ ನಿಂತಂತೆ ಕಂಡಿತು. ಭಕ್ತಾದಿಗಳು ಚಿಂತಿತರಾಗಿ ರಾಮಮಂದಿರಕ್ಕೆ ಮಹಾರಾಜರನ್ನು ಎತ್ತಿಕೊಂಡು ತಂದು, ತಮ್ಮ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡತೊಡಗಿದರು. ಮಹಾರಾಜರ ನಾಡಿ ಕೂಡ ಸಿಗದಂತಾಯಿತು. ಅವರ ಭಕ್ತರಲ್ಲಿ ಕೆಲವರು ಜೋರು ಜೋರಾಗಿ ಅಳುತ್ತಿದ್ದರು. ಮತ್ತೆ ಕೆಲವರು ರಾಮನಾಮ ಜಪಿಸುತ್ತಿದ್ದರು. ಇದನ್ನೆಲ್ಲ ನೋಡುತ್ತಿದ್ದ ಸಾಂಗ್ಲಿಯ ಮಹಿಳೆಗೆ ದುಃಖವನ್ನು ತಡೆಯಲಾಗಲಿಲ್ಲ. ಅವಳು ಜೋರಾಗಿ ರೋದಿಸತೊಡಗಿದಳು. ತಕ್ಷಣ ಅಲ್ಲಿ ನೆರೆದವರೆಲ್ಲರಿಗೂ ದಂಗು ಬಡಿಯುವಂತೆ ಎದ್ದು ಕುಳಿತ ಮಹಾರಾಜರು ಹೇಳಿದರು- "ಅಮ್ಮಾ ತಾಯಿ, ನಾನಿನ್ನೂ ಇಹಲೋಕವನ್ನು ತ್ಯಜಿಸಿಲ್ಲ; ನಿನ್ನ ಒಡವೆ ಪೆಟ್ಟಿಗೆಯನ್ನು ಹೇಗಿತ್ತೋ ಹಾಗೆಯೆ ನಿನಗೆ ಹಿಂದಿರುಗಿಸುತ್ತೇನೆ. ಅನಂತರ ನಾನು ಈ ಪ್ರಪಂಚವನ್ನು ತೊರೆದರೆ ನೀನು ಬಹುಶಃ ಅಷ್ಟಾಗಿ ಚಿಂತಿಸುವುದಿಲ್ಲ." ನಂತರ ಮಹಾರಾಜರು ಅಲ್ಲಿ ನೆರೆದಿದ್ದವರನ್ನು ಕುರಿತು ಹೇಳಿದರು "ನೋಡಿ, ಇದೇ ಪ್ರಪಂಚದ ಪರಿ. ಪ್ರಪಂಚಕ್ಕೆ ಅಂಟಿಕೊಂಡ ಪ್ರತಿಯೊಬ್ಬ ಮನುಷ್ಯನೂ ಹೀಗೆ ಸ್ವಾರ್ಥಿಯಾಗಿರುತ್ತಾನೆ. ಆಸೆಯಿಂದ ಬಂಧನ, ಬಂಧನದಿಂದ ಸ್ವಾರ್ಥ ಹುಟ್ಟುತ್ತದೆ. ಅಧ್ಯಾತ್ಮ ಜೀವನ ನಡೆಸುವವರು ಪ್ರಾಪಂಚಿಕ ವಸ್ತುಗಳಿಗೆ ಅಂಟಿಕೊಳ್ಳಬಾರದು. ಭಗವನ್ನಾಮ ಜಪ ಒಂದೇ ಈ ಭವರೋಗಕ್ಕಿರುವ ಔಷಧಿ. ನಾಮದ ಮಹಿಮೆಯನ್ನು ನಾವು ಸಾಧುಸಂತರಿಂದ ಕಲಿಯಬೇಕು."

## ರಾಮನ ಕಣ್ಣಲ್ಲಿ ನೀರು

೧೯೦೯ ರಲ್ಲಿ ದಹಿವಾಡಾ ತಾಲ್ಲೂಕಿಗೆ ಪ್ಲೇಗು ಬಂತು. ಮಹಾರಾಜರಿಗೂ ಪ್ಲೇಗು ತಗುಲಿತು. ಸುಡುವ ಜ್ವರದ ಜೊತೆಗೆ ಗಂಟಲಿನ ಬಳಿ ಗಡ್ಡೆ ಕಾಣಿಸಿತು. ಭಕ್ತಾದಿಗಳಿಗೆಲ್ಲಾ ಏನೋ ಆತಂಕ, ಅವರೆಲ್ಲ ಅಹರ್ನಿಶಿ ರಾಮಸಂಕೀರ್ತನೆ ನಡೆಸಿದರು. ಹೀಗೆ ಸಂಕೀರ್ತನೆ ನಡೆಯುತ್ತಿರುವಾಗ ಬೆಳಗಿನ ಸುಮಾರು ೧೧ ಗಂಟೆ ಸಮಯದಲ್ಲಿ ಅಲೌಕಿಕ ಘಟನೆಯೊಂದು ನಡೆಯಿತು. ದಾಮ್ಲೆ ಎಂಬ ಭಕ್ತನೊಬ್ಬ 'ರಘುಪತಿ ರಾಘವ ರಾಜಾರಾಂ' ಎಂದು ಹೇಳುತ್ತಾ ರಾಮನ ಮೂರ್ತಿಯನ್ನೇ ತದೇಕಚಿತ್ತದಿಂದ ನೋಡುತ್ತಿದ್ದ. ರಾಮನ ಕಣ್ಣಲ್ಲಿ ನೀರು ಹನಿಹನಿಯಾಗಿ ಒಸರುವುದು ಕಂಡಿತು. ದಿಗ್ಭ್ರಮೆಗೊಂಡ ದಾಮ್ಲೆ ತಕ್ಷಣ ಮಹಾರಾಜರ ಬಳಿ ಓಡಿದ. ಮಹಾರಾಜರು ಸತ್ಯ ಏನೆಂದು ತಿಳಿಯಲು ಮಂದಿರದೊಳಗೆ ಬಂದರು. ನೋಡುತ್ತಾರೆ - ರಾಮನ ಕಣ್ಣಲ್ಲಿ ಅಶ್ರುಧಾರೆ! ಮಹಾರಾಜರ ಹೃದಯ ತುಂಬಿ ಬಂತು. ಅವರು ರೇಷ್ಮೆ ವಸ್ತ್ರದಿಂದ ಅದನ್ನು ಒರೆಸಿದರು. ಆದರೂ ನೀರು ಒಸರುತ್ತಲೇ ಇತ್ತು. ಆಗ ಮಹಾರಾಜರು 'ಓ ನನ್ನ ಪ್ರೀತಿಯ ರಾಮ, ನನಗೆ ಖಾಯಿಲೆ ಬಂತೆಂದು ನೀನು ಅಳುತ್ತಿದ್ದೀಯೆ, ನಾನು ಬಹಳ ಬೇಗ ಗುಣಮುಖನಾಗುತ್ತೇನೆ'. ಹೀಗೆ ಹೇಳಿ ಮತ್ತೆ ಮತ್ತೆ ವಿಗ್ರಹದ ಕಣ್ಣೀರನ್ನು ಒರಸಿದರು. ಆದರೂ ಕಣ್ಣೀರು ಹರಿಯುವುದು ನಿಲ್ಲಲಿಲ್ಲ. ಈ ಸಮಾಚಾರ ಊರಿನ ತುಂಬ ಹರಡಿತು. ನೂರಾರು ಜನ ರಾಮಮಂದಿರಕ್ಕೆ ನುಗ್ಗಿದರು. ಎಲ್ಲರೂ ಈ ಅಲೌಕಿಕ ಘಟನೆಯನ್ನು ಕಣ್ಣಾರೆ ಕಂಡರು. ಈ ಸಂದರ್ಭದಲ್ಲಿ ಮಹಾರಾಜರು ನಗುತ್ತಾ, ಅಲ್ಲೇ ಇದ್ದ ಕೇಳಕರ್ ಎಂಬ ಎಂಜಿನಿಯರೊಬ್ಬರನ್ನು ಕೇಳಿದರು - "ಸರ್, ನೀವೊಬ್ಬ ಎಂಜಿನಿಯರ್. ವಿಗ್ರಹದ ಹಿಂದೆ ನೀರಿನ ಸೆಲೆ ಇದೆಯೆ ಎಂದು ಪರೀಕ್ಷಿಸಿ!" ಇಪ್ಪತ್ತು ನಿಮಿಷಗಳ ನಂತರ ನೀರು ಸುರಿಯುವುದು ನಿಂತುಹೋಯಿತು. ದೇವರು ಎಲ್ಲೆಲ್ಲೂ ಇದ್ದಾನೆ. ಜಡವಸ್ತುವಿನಲ್ಲಿ ಸಹ, ಭಕ್ತ ತನ್ನ ಶ್ರದ್ಧೆಯನ್ನು ಇರಿಸಿದಾಗ, ಮೂರ್ತಿ ಸಜೀವ ಮೂರ್ತಿಯಾಗುತ್ತದೆ; ಮನುಷ್ಯಸಹಜ ಸ್ವಭಾವಗಳನ್ನು ಪ್ರಕಟಿಸುತ್ತದೆ.

(ಪ್ರೊ. ಜಿ.ಎಸ್. ಜಯದೇವ್ ಅವರ 'ಗೋಂದಾವಲಿಯ ಸಂತ ಶ್ರೀ ಬ್ರಹ್ಮಚೈತನ್ಯರು' ಗ್ರಂಥದಿಂದ ಉದ್ಧೃತ)